

# ಕ್ಯಾನ್ಸರ್ ರೋಗಿಗಳಿಗೆ ವರ

# ಲಿಕ್ವಿಡ್ ಬಯಾಪ್ಸಿ

ಹೆಚ್ಚಿನ ನೋವು ಅನುಭವಿಸದೆ ರಕ್ತ ಪರೀಕ್ಷೆ ಮೂಲಕವೇ ಕ್ಯಾನ್ಸರ್‌ಕಾರಕ ಕಣವಿದೆಯೇ ಎಂಬುದನ್ನು ಪತ್ತೆ ಹಚ್ಚುವ ಅತ್ಯಾಧುನಿಕ ದ್ರವ ಅಂಗಾಂಶ ಪರೀಕ್ಷೆ ತಂತ್ರಜ್ಞಾನವನ್ನು ಬೆಂಗಳೂರಿನ ವೈದ್ಯರ ತಂಡ ಸಂಶೋಧನೆ ಮಾಡಿದೆ. ಇದು ಕ್ಯಾನ್ಸರ್ ರೋಗದ ಪತ್ತೆಗೆ ಸುಲಭ ವಿಧಾನ. 'ಲಿಕ್ವಿಡ್ ಬಯಾಪ್ಸಿ' ಹೆಸರಿನ ಈ ವೈದ್ಯಕೀಯ ತಂತ್ರಜ್ಞಾನ ಕ್ಯಾನ್ಸರ್ ರೋಗಿಗಳಿಗೆ ವರದಾನ.

■ **ಉಮಾ ಅನಂತ್**

ಕ್ಯಾನ್ಸರ್ ಎಂಬ ಪದವೇ ಬಹುತೇಕರಲ್ಲಿ ನಡುಕ ಹುಟ್ಟಿಸುವಂಥದ್ದು. ಇದು ಒಮ್ಮೆ ಬಂತೆಂದರೆ ಇದರ ಚಿಕಿತ್ಸೆಯೂ ಬಹಳ ತ್ರಾಸದಾಯಕ. ಇದು ರೋಗಿಯನ್ನಷ್ಟೇ ಅಲ್ಲ ಆತನ ಮನೆಯವರನ್ನೂ ಹೈರಾಣಾಗಿಸುವಂಥ ಕಾಯಿಲೆ. ಆದರೆ ಕ್ಯಾನ್ಸರ್ ಇರಬಹುದೇ ಎಂದು ಸಂಶಯ ಪಡುವ ಮತ್ತು ಆರಂಭದ ಹಂತದಲ್ಲಿರುವ ರೋಗಿಗಳು ಇನ್ನು ಆತಂಕ ಪಡಬೇಕಿಲ್ಲ. ಬೆಂಗಳೂರಿನ ವೈದ್ಯ ವಿಜ್ಞಾನಿಗಳು ಕ್ಯಾನ್ಸರ್ ವಿರುದ್ಧ ಹೋರಾಡುವ ಸಲುವಾಗಿ ಮತ್ತು ಚಿಕಿತ್ಸೆ ಸುಲಭಗೊಳಿಸಲೆಂದೇ ಸಂಪೂರ್ಣ ದೇಸೀ ತಂತ್ರಜ್ಞಾನದಲ್ಲಿ ಒಂದು ಚಿಕಿತ್ಸಾ ಕ್ರಮವನ್ನು ಅಭಿವೃದ್ಧಿ ಪಡಿಸಿದ್ದಾರೆ. ಇದು ಯಾವುದೇ ಅಡ್ಡ ಪರಿಣಾಮ ಇಲ್ಲದ ಅಗ್ಗ, ಸರಳ ಮತ್ತು ನಿಖರ ಫಲಿತಾಂಶ ನೀಡುವ ಚಿಕಿತ್ಸಾ ವಿಧಾನವಾಗಿದೆ.

ಬೆಂಗಳೂರಿನ ಸ್ಟ್ರಾಂಡ್ ಲೈಫ್‌ಸೈನ್ಸ್ ಮತ್ತು ಮಜುಂದಾರ್ ಷಾ ಫಾರ್ ಟ್ರಾನ್ಸ್‌ಲೇಷನ್ ರಿಸರ್ಚ್ ಜಂಟಿಯಾಗಿ 'ಲಿಕ್ವಿಡ್ ಬಯಾಪ್ಸಿ' ಎಂಬ ಸುಧಾರಿತ ತಂತ್ರಜ್ಞಾನವನ್ನು ಅಭಿವೃದ್ಧಿಪಡಿಸಿದ್ದಾರೆ. ಇದು ನೋವು ರಹಿತ, ನಿಖರ ಫಲಿತಾಂಶ ನೀಡುವ ಅತ್ಯಾಧುನಿಕ ಚಿಕಿತ್ಸೆ.

ಇದುವರೆಗೆ ಕ್ಯಾನ್ಸರ್ ಪತ್ತೆಯನ್ನು ದೇಹದಿಂದ ಸ್ವಲ್ಪಭಾಗದ ಅಂಗಾಂಶ ಪಡೆದು ಇದನ್ನು ಲ್ಯಾಬೊರೇಟರಿಯಲ್ಲಿ ವಿಕಿರಣಕಾರಿ ಸ್ಕ್ಯಾನ್ ಮೂಲಕ ಪತ್ತೆ ಹಚ್ಚಲಾಗುತ್ತಿತ್ತು. ಇದು ನೋವಿನಿಂದ ಕೂಡಿದ್ದು ಜತೆಗೆ ಈ ಪ್ರಕ್ರಿಯೆ ಅಷ್ಟು ಸುಲಭವೂ ಅಲ್ಲ. ಆದರೆ ಲಿಕ್ವಿಡ್ ಬಯಾಪ್ಸಿಯಿಂದ ಬಹುಬೇಗ ನಿಖರವಾದ ಫಲಿತಾಂಶ ಪಡೆಯಬಹುದು. 'ಲಿಕ್ವಿಡ್ ಬಯಾಪ್ಸಿ'ಯಲ್ಲಿ ಸರಳವಾಗಿ ರಕ್ತವನ್ನು ಪಡೆದುಕೊಂಡು (ಯಾವುದೇ ವಿಕಿರಣಕಾರಿ ಸ್ಕ್ಯಾನ್ ಬಳಸದೆ) ಕ್ಯಾನ್ಸರ್‌ನ ಕುರುಹನ್ನು ಪತ್ತೆ ಹಚ್ಚಬಹುದು. ಸಾಮಾನ್ಯ ರಕ್ತದ ಮಾದರಿ ಪರೀಕ್ಷೆ ಮೂಲಕ ದೇಹದಲ್ಲಿಯ ಕ್ಯಾನ್ಸರ್‌ಕಾರಕ ಜೀವಕೋಶ, ಗಡ್ಡೆಗಳನ್ನು ಲಿಕ್ವಿಡ್ ಬಯಾಪ್ಸಿ ನೆರವಿನಿಂದ ನಿಖರವಾಗಿ ಪತ್ತೆ ಹಚ್ಚಲು ಈ ವಿಧಾನ ನೆರವಾಗಲಿದೆ.

ಕ್ಯಾನ್ಸರ್ ಪತ್ತೆಗೆ ಸದ್ಯ ಅನುಸರಿಸಲಾಗುತ್ತಿರುವ ಎಲ್ಲ ಬಗೆಯ ಪರೀಕ್ಷೆಗಳಿಗಿಂತ ಇದು ಅತ್ಯಂತ ಸರಳ, ಅಗ್ಗವಾದ ವಿಧಾನ ಇದಾಗಿದೆ. ಯಾವುದೇ ಅಡ್ಡ ಪರಿಣಾಮಗಳಿಲ್ಲದೇ ನಿಖರವಾಗಿ ಕ್ಯಾನ್ಸರ್ ಜೀವಕೋಶ, ಅದು ಯಾವ ಹಂತದಲ್ಲಿದೆ ಎನ್ನುವುದನ್ನು ದ್ರವ ಅಂಗಾಂಶ ಪರೀಕ್ಷೆ ಮೂಲಕ ಪತ್ತೆ ಮಾಡಬಹುದು.

## ಏನಿದು ಲಿಕ್ವಿಡ್ ಬಯಾಪ್ಸಿ?

ಕ್ಯಾನ್ಸರ್‌ಕಾರಕ ಜೀವಕೋಶಗಳು ರಕ್ತದಲ್ಲಿ ಬಿಡುಗಡೆ ಮಾಡುವ ವಂಶ ವಾಹಿಗಳ (ಡಿಎನ್‌ಎ) ಮೂಲಕ ಸುಲಭವಾಗಿ ಪತ್ತೆ ಮಾಡುವ ತಂತ್ರಜ್ಞಾನವೇ 'ಲಿಕ್ವಿಡ್ ಬಯಾಪ್ಸಿ'. ಕ್ಯಾನ್ಸರ್ ಪತ್ತೆ ಸುಲಭವಾದರೂ ಅದನ್ನು ಪತ್ತೆ ಮಾಡುವ ರಕ್ತ ಪರೀಕ್ಷೆ ತುಂಬಾ ಸಂಕೀರ್ಣವಾದದ್ದು. ಹಲವಾರು ಹಂತದಲ್ಲಿ ಡಿಎನ್‌ಎ ಅಧ್ಯಯನದ ಮೂಲಕ ಕರಾರುವಾಕ್ಕಾಗಿ ಕ್ಯಾನ್ಸರ್ ಪತ್ತೆ ಮಾಡಬಹುದು. ಈ ನಿಟ್ಟಿನಲ್ಲಿ ಲಿಕ್ವಿಡ್ ಬಯಾಪ್ಸಿ ಕ್ಯಾನ್ಸರ್ ರೋಗಿಗಳಿಗೆ ವರದಾನವಾಗಿದೆ.

ಇದು ರೋಗಿಯಿಂದ ಸರಳವಾಗಿ ರಕ್ತವನ್ನು ಪಡೆದುಕೊಂಡು ಅದರಿಂದ

